ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 1-4
©*IIMRD*, Mysuru

www.iimrd.com

# ಸ್ವಾತಂತ್ರ್ಯದ ಧ್ಯಾನದಲ್ಲಿ ಅಡಿಗರ ಕಾವ್ಯಗಳು

**ಕುಸುಮ ಬಿ.ಎಂ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

**ಸಾರಾಂಶ: (Abstract)**

*ಸ್ವಾತಂತ್ರ್ಯವೆಂಬುದು ಬಂಧನವಿಲ್ಲದ ಸ್ಥಿತಿ. ಪ್ರತಿಯೊಂದು ಜೀವವೂ ಸ್ವಾತಂತ್ರ್ಯವನ್ನು ಬಯಸುತ್ತದೆ. ಅಡಿಗರ ಕಾವ್ಯಗಳು ಕೂಡ 'ಬಯಲ' ಕನವರಿಕೆಯಲ್ಲಿ ಬಂಧನಗಳಿಂದ ಮುಕ್ತಿಯನ್ನು ಅಪೇಕ್ಷಿಸುತ್ತವೆ. ಕನ್ನಡ ಕಾವ್ಯರಚನೆಯಲ್ಲಿ ಹೊಸಮಾರ್ಗ ಸೃಷ್ಟಿಸಿದ ಅಡಿಗರ ಕಾವ್ಯಗಳು ನಾಯಕನ ಸ್ವಕೇಂದ್ರಿತ ಪ್ರಜ್ಞೆಯಲ್ಲಿ, ಅವನ ಅಸಹಾಯಕತೆ ಮತ್ತು ನಿಶ್ಚಲವಾಗಿರುವ ಬದುಕು, ಅದರಿಂದಾಗಿ ಬಂಧಿಯಾಗಿರುವ ತನ್ನ ಸ್ಥಿತಿಯನ್ನು ಅವಲೋಕಿಸುತ್ತವೆ ಮತ್ತು ಈ ಅರಿವಿನಿಂದ ದೊರೆತ ಜ್ಞಾನದ ಫಲವಾಗಿ ಸ್ವಾತಂತ್ರ್ಯವಾಗಲೂ ಹಂಬಲಿಸುತ್ತವೆ.*

**ಮುಖ್ಯಪದಗಳು (Keywords):** *ಕನ್ನಡ ಸಾಹಿತ್ಯ, ಅಡಿಗರ ಕಾವ್ಯಗಳು, ನನ್ನ ಅವತಾರ*

**ಪೀಠಿಕೆ**

ಅಡಿಗರ 'ನನ್ನ ಅವತಾರ' ಕಾವ್ಯವು ಕಾವ್ಯ ನಾಯಕನ ಈ ಸ್ಥಿತಿಯನ್ನು ಮನೋಜ್ಞವಾಗಿ ಚಿತ್ರಿಸುತ್ತದೆ. ಕವನದ ನಾಯಕ ರಾಮನ, ಕೃಷ್ಣನ, ಬುದ್ಧನ, ಗಾಂಧಿಯ ನಿಕಟವರ್ತಿಯಾಗಿ ಅತಿ ಸನಿಹದಲ್ಲಿದ್ದರೂ ಅವರಂತೆ ತಾನು ಸಾಧನೆಯನ್ನು ಮಾಡಲಾರದ, ಯಾವ ಔನ್ನತ್ಯಕ್ಕೂ ಏರದ ತನ್ನ ವಿಫಲತೆಗೆ ಹಳಹಳಿಸುತ್ತಾನೆ. ಆರೆಂದರೆ ಹಿಗ್ಗದ, ಮೂರೆಂದರೆ ಕುಗ್ಗದ ತನ್ನ ಇರುವಿಕೆಯೆ ಆಶ್ಚರ್ಯಪಡುವಂತಾಗಿದೆ. ಈ ವಿಫಲತೆಯು ಅವನೆದೆಯ ಮೆತ್ತೆಯಲ್ಲಿ ನೂರು ಚೇಳಿನ ಕೊಂಡಿಯಾಗಿ ಕುಟುಕುತ್ತಿದೆ. ನಾನು ಅವನು ಒಂದೇ ಲೋಹವಾಗಿದ್ದರೂ

***"ಯಾವ ರಸವು ಸೋಂಕಿತವನ?***

***ಯಾವ ಬೆಂಕಿ ತಾಕಿತವನ?"***

ಎಂದು ಪ್ರಶ್ನಿಸಿಕೊಳ್ಳುವಲ್ಲಿಯೂ ಅವನಂತೆ ತಾನಾಗಲೂ ಸಾಧ್ಯವಾಗದ ನೋವು ಕಾಣುತ್ತದೆ. ಚಲನವೇ ಬದುಕು, ನಿಶ್ಚಲವೆ ಮರಣವೆಂಬ ಛಾಯೆ ಆವರಿಸುತ್ತದೆ.

ಯು.ಆರ್.ಅನಂತಮೂರ್ತಿಯರು 'ಭೂಮಿಗೀತ' ಕವನ ಸಂಕಲನದ ಬಗೆಗೆ ಬರೆದ ವಿಶ್ಲೇಷಣೆಯನ್ನು ಇಲ್ಲಿ ಪರಿಗಣಿಸಬಹುದಾಗಿದೆ. "ಅಡಿಗರ ಹಿಂದಿನ ಕವನಗಳು 'ಆತ್ಮವ್ಯಂಜಕ' ಮತ್ತು 'ಸಾಮಾಜಿಕ' ಎಂದು

*Please cite this article as:* ಕುಸುಮ, ಬಿ.ಎಂ. (2026). ಸ್ವಾತಂತ್ರ್ಯದ ಧ್ಯಾನದಲ್ಲಿ ಅಡಿಗರ ಕಾವ್ಯಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4). ಪು.ಸಂ.* 1–4

ವಿಭಾಗಿಸಬಹುದಾದಷ್ಟು ಸರಳವಾಗಿರುತ್ತಿದ್ದವು. ಸಾಮಾಜಿಕ ಪ್ರಜ್ಞೆ ಹೇಗೆ ಪೂರ್ಣ ಬಾಹ್ಯವಲ್ಲವೋ, ಆತ್ಮವ್ಯಂಜಕವೂ ಅಷ್ಟೇ ಅಂತರಂಗ ಮಾತ್ರಕ್ಕೆ ಸಂಬಂಧಪಟ್ಟದ್ದಲ್ಲವಾದ್ದರಿಂದ ಈ ಸಂಕಲನದಲ್ಲಿರುವ ಕವನಗಳ ಸಂಕೀರ್ಣತೆ ಹೆಚ್ಚಿದೆ. ಭೂಮಿಗೀತದ ನಾಯಕ, 'ಓಡಲೆಳೆಸುತಿಹುದು ಜೀವ', 'ಮೋಹನ ಮುರಲಿ', 'ಅತಿಥಿಗಳು', 'ಹಿಮಗಿರಿಯ ಕಂದರ' ಪದ್ಯಗಳಲ್ಲಿ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವ' ನಾಯಕನೆ. ಆದರೆ ಹಿಂದಿಗಿಂತ ಹೆಚ್ಚು ಅನುಭವ ಪಡೆದವನು."

ಅವರ 'ಶ್ರೀರಾಮನವಮಿಯ ದಿವಸ' ಕವನವು ಮಣ್ಣಿನಲ್ಲಿ ಬಿದ್ದ ಬೀಜವೊಂದು ಮಳೆಯ ಆಗಮನಕ್ಕಾಗಿ ಕಾದು ಗಾರಾಗಿದ್ದರೂ ತನ್ನ ಚೈತನ್ಯವನ್ನೆಲ್ಲಾ ಒಟ್ಟುಗೂಡಿಸುತ್ತದೆ. ವರ್ಷಾಗಮನದ ಜೊತೆಗೆ ಮೋಡದೆಡೆಗೆ ಬೆಳೆಯುವ ವೇಗವನ್ನು ತೋರುತ್ತದೆ.

***"ಕಾದು ಗಾರಾದ ಮಣ್ಣೊಡಲಿನೊಳಗಡೆಗೆ ಕಿಡಿ–***

***ಕುಳಿತ ಮೂಲಾಧಾರ ಜೀವಧಾತು***

***ಮೋಡದ ಸಹಸ್ರಾರದೆಡೆಗೆ ತುಡಿಯುವ ತುರುಸು;***

***ಮಣ್ಣೊಡೆದು ಹಸುರು ಹೂ ಹುಲ್ಲು ಮುಳ್ಳು."***

ಹೀಗೆ ಬೆಳವಣಿಗೆಯ ಕನಸು ಅಡಿಗರ ಕವನಗಳಲ್ಲಿ ಒಂದಲ್ಲ ಒಂದು ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಸದಾ ಊರ್ಧ್ವಮುಖಿಯಾಗಿ ಬೆಳೆಯಲು ಬಯಸುವ ಕವಿಚೇತನವನ್ನು ಕಾಣಬಹುದು. ಬೆಳೆಯಲು ಸಾಕಷ್ಟು ಯೋಗ ಬೇಕು ಎಂದು ತಮ್ಮ 'ಭರವಸೆ' ಪದ್ಯದಲ್ಲಿ ಹೇಳುತ್ತಾರೆ. ಯುಗಯುಗವೇ ಕಾಯಬೇಕಾದ ಚಿತ್ರಣವಿದೆ.

***"ಮೊಳೆಯೆ ಬೆಳೆಯೆ ಶುಭ ಬೇಕು ಯುಗಯುಗ,***

***ಕಾದು ಕುಳ್ಳಿರೋ ತಾಳದ ಉಬ್ಬೆಗ!"***

ಹಿಮಗಿರಿಯ ಕಂದರದ ನಾಯಕನಿಗೆ ವಿಷಮಿಸುವ ಅವನ ವರ್ತಮಾನದ ತಾಪದಲ್ಲಿ (ಬಿಡಿಸಲಾರದ ಸಿಕ್ಕುಗಳಲ್ಲಿ ಬಂಧಿಯಾದ) ಬೇಯುವ ಚಿತೆಯ ಮೇಲೆ ಮಲಗಿದ ಅನುಭವವನ್ನುಂಟು ಮಾಡುತ್ತದೆ.

***"ಮಿಗ ಹಕ್ಕಿ ಹಣ್ಣು ಹೂ ತಳಿರ ತೇಗಿದ ಅಗ್ನಿ***

***ಖಾಂಡವದಿ ಮುಂದೇನು ಎನ್ನುತ್ತಿತ್ತು."***

ಹೀಗಿರಲು ಅವನಿಗೆ ಬಯಲ ಆಹ್ವಾನ ಕೇಳುತ್ತದೆ.

***ಕರೆಯುತ್ತಿದೆ ಹಿಮಗಿರಿಯ ಕಂದರ;***

***"ಬಂದೆಯಾ, ಮಗು ಬಂದೆಯಾ"***

ಆ ಕರೆಗೆ ಅವನ ಮನವೂ ಪುಟಿದೇಳುತ್ತಿದೆ. ಅವನನ್ನು ಒತ್ತಾಯಿಸುತ್ತದೆ.

***ನಡೆಯೊ ಅಲ್ಲಿಗೆ ಮುಚ್ಚಿದೆವೆ ಮೇಲೆ ತಂಗಾಳಿ***

***ತಿಂಗಳನು ಲೇಪಿಸುವ ಪರ್ಣಕುಟಿಗೆ;***

***ಸಿಪ್ಪೆ ತಿರುಳಿಂದ ಬರಿ ಬೀಜಕುಪ್ಪಳಿಸಿರುವ***

***ತಿನದ ತೇಗಿನ ಮೂಕ ಸರಿಗಮಕ್ಕೆ.***

ಈ ಮಾತಿಗೆ ಮನವು ಹಸುರ ಬೆರಳು ತೋರುತ್ತಿದ್ದರೂ ಟಿಕ್ ಟಿಕ್ ಎಂಬ ವಾಚು ಅವನನ್ನು ಈ ವರ್ತಮಾನದ ತಾಪದಲ್ಲಿಯೇ ಉಳಿಸುತ್ತದೆ. ಅವನ ಹಂಬಲ ಭಗ್ನ ಸೇತುವೆಯಾಚೆ ನಿಂತ ರೈಲನು ಏರಲಾರದೆ ಕನವರಿಸುತ್ತದೆ.

***ಹಿಮಗಿರಿಯ ಕಂದರ....***

***ಗಿರಿಯ ಕಂದರ....***

***ಕಂ...ದ...ರ...***

***...ದ...ರ...***

***...ರ....***

ಭೂಮಿಗೀತ ಕಾವ್ಯದ ನಾಯಕ ಲೌಕಿಕ ಜೀವನದಲ್ಲಿಯೇ ಮುಳುಗಿ ಹೋಗಿರುವವ, ತನ್ನ ಕಾಲಗಳು ಎಷ್ಟು ಆಳವಾಗಿ ನೆಲೆಯಾಗಿವೆ ಎಂಬುದರ ಅರಿವುಳ್ಳವನು. ತಾನು ಕನವರಿಸುತ್ತಿರುವ ನಕ್ಷತ್ರಲೋಕಕ್ಕೆ ಪಯಣ ಬರಿಯ ಸುಳ್ಳು ಎಂಬುದನ್ನು ಅರಿತಿದ್ದಾನೆ. 'ಇವಳೆದೆಗೆ ಬೇರಿಳಿದ ಕಾಲು ನನ್ನದು ಬರಿದೆ ನಕ್ಷತ್ರಲೋಕಕ್ಕು ರೈಲುಬಿಟ್ಟೆ'. ಹಾಗಾಗಿ ತನ್ನ ಮನದ ಬಚ್ಚಲಿನಲ್ಲಿ ಕೊನೆಯಿರದ ಕೊನೆಯ ಬಟ್ಟೆ(ದಾರಿ)ಯನ್ನು ಹುಡುಕುತ್ತಿದ್ದಾನೆ.

ಅವನಿಗೂ ತಿಳಿದಿದೆ ಈ ಅನಂತವಾದ ದಾರಿಯೆಡೆಗೆ ಸಾಗುವುದು ಸುಲಭವಲ್ಲವೆಂದು. ಇಹದ ಬದುಕೆಂಬ ಕೆಸರಿನಲ್ಲಿ ಹುಗಿದ  ಕಾಲನ್ನು ಕೀಳುವುದು ಕೂಡ ಆಕಾಶವೆಂಬ ಬಯಲನ್ನು ಸೇರುವಷ್ಟೇ ಕಷ್ಟವೆಂದು.

***ಕೆಸರಲ್ಲಿ ಹುಗಿದ ಕಾಲನ್ನು ಕೀಳುವುದೆಷ್ಟು ಕಷ್ಟ ಅಷ್ಟೇ ಕಷ್ಟ–***

***ಆಕಾಶ ಪಂಜರದ ಹೊನ್ನ ಸರಿಗೆಯ ನಡುವೆ ನಡೆವ ಹಗರಣ ಕೂಡ***

ಗೊಂದಲಪುರ ಕವನದ ಈ ಸಾಲುಗಳನ್ನು ಗಮನಿಸಿ

***ಬಿದ್ದವನು ಬಿದ್ದ, ಎದ್ದವನು ಎದ್ದ, ಪಂಥಕಟ್ಟಿ ಗೆದ್ದವನನೊಬ್ಬ ಗೆದ್ದ;***

***ಕಾಲ ಬಲವಿಲ್ಲದ ಶಿಖಂಡಿ ನರಪೇತಲ ಗೊರಸು ತುಳಿತಕ್ಕೆ ಸಿಕ್ಕಿಬಿದ್ದ!***

***ಗೆದ್ದವಗು ಸಿದ್ಧವಿದೆ ಹೊಂಡ ಆಳುದ್ದ;***

***ಇದು ವಿಧಿಯ ವಹಿವಾಟಿಗಿಂತಲೂ ಅಬದ್ಧ***

*Call no man happy till he dies.*

ಇಹದ ಗೆಲುವು ಎಷ್ಟು ನಶ್ವರವಾದುದು ಮತ್ತು ಕುಟಿಲತೆಯಿಂದ ಕೂಡಿದ್ದು ಎಂಬ ಚಿತ್ರಣ ನೀಡುತ್ತದೆ. ಕೊನೆಯಲ್ಲಿ ಬರುವ ಆಂಗ್ಲಭಾಷೆಯ ಸಾಲುಗಳು  ಸುಖವನ್ನು ಅರಸಿ ಹೊರಡುವ ಲೌಕಿಕ ಬದುಕಿನಲ್ಲಿ

ಸುಖವಿಲ್ಲದಿರುವ ದುರಂತವನ್ನು ಬಿಂಬಿಸುತ್ತವೆ. ಹುಟ್ಟು ಸಾವಿನ ನಾಟಕವನ್ನು ನೆನಪಿಸುತ್ತವೆ. ಇಲ್ಲಿ ಹಿಮಗಿರಿಯ ಕಂದರದ ಸಾಲುಗಳು ಮತ್ತೆ ನೆನಪಾಗುತ್ತವೆ.

***ಪುನರಪಿ ಜನನಂ ಪುನರಪಿ ಮರಣಂ***

***ಪುನರಪಿ ಜನನೀ ಜಠರೇ ಶಯನಂ***

***ಇಹ ಸಂಸಾರೇ ಖಲು ದುಸ್ತಾರೇ***

***ಕೃಪಯಾಪಾರೇ ಪಾಹಿ ಮುರಾರೇ***

"ಭಾವತರಂಗದಿಂದ ಭೂಮಿಗೀತದವರೆಗೆ ಅಭಿವ್ಯಕ್ತವಾದ ಕವಿಜೀವ ಒಂದೇ ಎಂಬುದು ಬಹುಮುಖ್ಯವಾಗಿ ಗಮನಿಸಬೇಕಾದ್ದು. ಕವಿಶಕ್ತಿಯ ಪೂರ್ಣಾವಿಷ್ಕರಣಕ್ಕಾಗಿ ಇವರ ಕವನ ರಚಿಸುವ ಕ್ರಮದಲ್ಲಾದ ಬದಲಾವಣೆ ಎಲ್ಲ ಶ್ರೇಷ್ಠ ಕವಿಗಳಲ್ಲೂ ಆಗಬೇಕಾದ್ದೆ." ಎಂದು ಯು.ಆರ್ ಅನಂತಮೂರ್ತಿಯವರು ಹೇಳಿರುವ ಮಾತನ್ನು ಇಲ್ಲಿ ಗಮನಿಸಬಹುದು.

***ಬಾವಿಯೊಳಗಡೆ ಕೊಳೆವ ನೀರು; ಮೇಲಕ್ಕಾವಿ;***

***ಆಕಾಶದುದ್ದಕೂ ಅದರ ಕಾರಣ ಬೀದಿ;***

***ಕಾರ್ಮುಗಿಲ ಖಾಲಿಕೋಣೆಯ ಅಗೋಚರ ಬಿಂದು***

***ನವಮಾಸವೂ ಕಾವ ಭ್ರೂಣರೂಪಿ–***

***ಅಂತರಪಿಶಾಚಿ ಗುಡುಗಾಟ, ಸಿಡಿಲಿನ ಕಾಟ–***

***ಭೂತರೂಪಕ್ಕೆ ಮಳೆ ವರ್ತಮಾನ***

ಅಡಿಗರ ಭೂತ ಕವನದಲ್ಲಿ ಹಳೇಬಾವಿಯ ನೀರು ಮಳೆಯಾಗಿ ತನ್ನ ಉದ್ಧಾರವನ್ನು ಮಾಡಿಕೊಳ್ಳುವ ಚಿತ್ರಣವು ಕಾಣುತ್ತದೆ ಕೊಳೆವ ಸ್ಥಿತಿಯಿಂದ ದೊರೆತ ಸ್ವಾತಂತ್ರ್ಯವು ಇಲ್ಲಿ ಮುಖ್ಯವಾಗುತ್ತದೆ. ಹಾಗೆಯೇ ಅಡಿಗರ ಕವನದ ನಾಯಕನೂ ಏನೂ ಆಗದ ಸ್ಥಿತಿಯಿಂದ ಹನುಮದ್ವಿಕಾಸಕ್ಕೆ ತುಡಿಯುತ್ತಾನೆ. ವರ್ಧಮಾನ ಕವನದ ಕೆಳಗಿನ ಸಾಲುಗಳಲ್ಲಿ ಈ ಚಿತ್ರವನ್ನು ಕಾಣಬಹುದು

***ಗಹ್ವರದ ಮುಖ ಅಲ್ಲಿ; ಆಚೆ ಬಯಲ ಬರಾವು;***

***ಹಣ್ಣು ಹಂಪಲು ಹಸುರ ಬಲ್ಲೆ, ಬಲ್ಲೆ;***

***ಜೀವನ ನಿಧಾನಶ್ರುತಿ ಶುದ್ಧಿ ಮೊರೆವ ಕರಾವು***

***ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ.***

**ಪರಾಮರ್ಶನ ಗ್ರಂಥಗಳು**


- ಅನಂತಮೂರ್ತಿ, ಯು.ಆರ್. (2014). ಪ್ರಜ್ಞೆ ಮತ್ತು ಪರಿಸರ. ಅಂಕಿತ ಪುಸ್ತಕ.
- ಗೋಪಾಲ ಕೃಷ್ಣ ಅಡಿಗ. (2010). ಸಮಗ್ರ ಕಾವ್ಯ. ಸಪ್ನ ಬುಕ್ ಹೌಸ್.